ಈಗ ತಾವು ನೋಡಬಹುದು, ತಮ್ಮೆದುರಿಗೆ ಅಲ್ಲೇ ಪ್ರತಿಗಳು ಇವೆ, ಇಲ್ಲಿಯೂ ಇವೆ. ಈಗ ಅವರು ಕೊಡುವುದಕ್ಕೆ ಸಿದ್ಧಮಾಡಿಕೊಂಡು ಕುಳಿತುಕೊಳ್ಳಬೇಕು. ಏಕೆಂದರೆ, ನಾವು ಓದುವ ಹೊತ್ತಿಗೆ ನಮಗೆ ಕೊಟ್ಟಿಲ್ಲ ನಮಗೆ ಕೊಟ್ಟಿಲ್ಲ, ತಡವಾಗುತ್ತಿದೆ ಎಂದು ಎಷ್ಟೋ ಸಾರಿ ನಾವೇ ಅಬ್ಜೆಕ್ಷನ್ ತೆಗೆದುಕೊಂಡಿದ್ದೇವೆ. ಆ ದೃಷ್ಟಿಯಿಂದ ಪ್ರತಿಗಳನ್ನು ತೆಗೆದು ಇಟ್ಟಿರತಕ್ಕಂಥದ್ದು. ಅದನ್ನು ನಿಮಗೆ ಕೊಡಲೇಬೇಕಾಗುತ್ತದೆ. ಅದನ್ನು ಅಲ್ಲಿ ಇಡಲೇಬೇಕಾಗುತ್ತದೆ. ಆ ದೃಷ್ಟಿಯಿಂದ ಕೊಟ್ಟಿದೆಯೇ ವಿನಃ..

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ:- ಅವರು ಹೇಳಿದ್ದಕ್ಕೆ ಒಂದಕ್ಕೂ ತಾವು ಉತ್ತರವನ್ನು ಕೊಡಲಿಲ್ಲ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ:- ನಾನು ಏನು ಹೇಳುತ್ತೇನೆ, ತಾವು ಹೇಳಿರತಕ್ಕಂಥದ್ದು ಸರಿಯೋ ಇಲ್ಲವೋ ಅದನ್ನು ಅವರು ವಿಚಾರ ಮಾಡುತ್ತಾರೆ. ಇದನ್ನು ಮಾನ್ಯ ವಿರೋಧ ಪಕ್ಷದ ನಾಯಕರೂ ಕೂಡ ಒಪ್ಪುತ್ತಾರೆ ಎಂದು ನಾನು ಭಾವಿಸಿದ್ದೇನೆ. ಅದು ಸರಿಯೋ ಇಲ್ಲವೇ ಎನ್ನುವುದನ್ನು ಅದನ್ನು ಸಭಾಧ್ಯಕ್ಷರಿಗೆ ಬಿಡೋಣ. ಅವರ ತೀರ್ಪಿಗೆ ನಾವು ತಲೆಬಾಗೋಣ. ಇದಕ್ಕಿಂತ ಹೆಚ್ಚಿಗೆ ಏನು ಹೇಳುವುದು? ಅವರೇ ಅದನ್ನು ವಿಚಾರ ಮಾಡಲಿ. ಮಾನ್ಯ ಸಭಾಧ್ಯಕ್ಷರೆ, ನಾನು ಇದನ್ನು ತಮಗೇ ಬಿಡುತ್ತೇನೆ.

ಪ್ರೊ: ಎಂ.ಡಿ. ನಂಜುಂಡಸ್ವಾಮಿ:- ಮಾನ್ಯ ಅಧ್ಯಕ್ಷರೇ, ಈಗಾಗಲೇ ಈ ಸದನದ ಹೊರಗಡೆ ಇರುವಂಥ ಪ್ರಜೆಗಳಿಗೆ ನ್ಯಾಯಾಲಯಕ್ಕೆ ಹೋಗುವಂಥ ಹಕ್ಕನ್ನು ಈ ಪ್ರಕರಣ ಕೊಟ್ಟುಬಿಟ್ಟಿದೆ. ಇದನ್ನು ನಾನು ಈ ಸದನದ ಎಲ್ಲಾ ಗೌರವಾನ್ವಿತ ಸದಸ್ಯರ ಗಮನಕ್ಕೆ ತರತಕ್ಕಂಥ ಒಂದು ಅವಶ್ಯಕತೆ ಇದ್ದುದರಿಂದ ನಾನು ಎದ್ದು ನಿಂತಿದ್ದೇನೆ. ಈ ವಿಷಯ ಈಗಾಗಲೇ ಸದನದಿಂದ ಆಚೆಗೆ ಹೋಗಿದೆ. ತಾವು ಮುಂದುವರಿಯಬಹುದು. ನಾನಂತೂ ಇನ್ನು ಮುಂದಿನ ಚಟುವಟಿಕೆಗಳಲ್ಲಿ ಭಾಗವಹಿಸುವುದಿಲ್ಲ ಎಂದು ಹೇಳುವುದಕ್ಕೆ ನಾನು ಎದ್ದು ನಿಂತಿರುವುದು. This has already gone out of the House.

ನಾಲ್ಕು ಕೋಟಿ ನಮ್ಮ ಕರ್ನಾಟಕದ ಪ್ರಜೆಗಳು ಏನು ಇದ್ದಾರೆ, ಅವರಿಗೆ ನ್ಯಾಯಾಲಯ ಹತ್ತುವಂಥ ಹಕ್ಕು ಬಂದುಬಿಟ್ಟಿದೆ, because this has become a scrap of paper. It is no more a Budget. It is a scrap of paper that cannot be implemented.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್:- ಒಂದೇ ಒಂದು ವಿಷಯ ಗೊತ್ತಾಗಿದ್ದರೆ ತಾವು ಹೇಳಿ ನೋಡೋಣ. ಸ್ಕ್ರಾಪ್ ಪೇಪರ್ ಎಂದು ಹೇಳುತ್ತೀರಲ್ಲಾ ಹೇಗೆ?

(ಗೊಂದಲ)

ಪ್ರೊ: ಎಂ.ಡಿ. ನಂಜುಂಡಸ್ವಾಮಿ:- ಮಾನ್ಯ ಸಭಾಧ್ಯಕ್ಷರೆ, ನನ್ನದು ಒಂದೇ ಒಂದು ವಿನಂತಿ.

ಇದು ಈ ಸದನದ ಘನತೆ ಗೌರವದ ಪ್ರಶ್ನೆಯಾಗಿದೆ. ಆ ಕಾರಣ ಇವತ್ತಿನ ಚಟುವಟಿಕೆಗಳಲ್ಲಿ ನಾನು ಮಾತ್ರ ವೈಯಕ್ತಿಕವಾಗಿ ಭಾಗವಹಿಸುವುದಕ್ಕೆ ನನಗೆ ಇಷ್ಟವಿಲ್ಲ.

ಅಧ್ಯಕ್ಷರು:- ಸ್ವಲ್ಪ ಕುಳಿತುಕೊಳ್ಳಿ.

ಪ್ರೊ: ಎಂ.ಡಿ. ನಂಜುಂಡಸ್ವಾಮಿ:- ತಾವು ದಯವಿಟ್ಟು ಕೇಳಬೇಕು. ತಾವು ಏನು ರೂಲಿಂಗ್ ಕೊಡುತ್ತೀರೋ ಆನಂತರ ನಾನು ಸಭಾತ್ಯಾಗ ಮಾಡಬಾರದು ಎನ್ನುವ ಕಾರಣದಿಂದ ನಾನು ಮುಂಚೆಯೇ ಹೋಗುತ್ತಿದ್ದೇನೆ, ಅಷ್ಟೆ.

(ಈ ಹಂತದಲ್ಲಿ ಮಾನ್ಯ ನಂಜುಂಡಸ್ವಾಮಿಯವರು ಸಭಾತ್ಯಾಗ ಮಾಡಿದರು.)

ಅಧ್ಯಕ್ಷರು:- ವಿಚಾರಗಳೆಲ್ಲಾ ಅರ್ಥವಾಗಿದೆ. ಆದುದರಿಂದ ಸಂಕ್ಷಿಪ್ತವಾಗಿ ತಾವು ತಮ್ಮ ಅಭಿಪ್ರಾಯವನ್ನು ಹೇಳಬೇಕು.

ಶ್ರೀ ಸಿ. ಬೈರೇಗೌಡ: ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಾನ್ಯ ಸಂಸದೀಯ ವ್ಯವಹಾರಗಳ ಮಂತ್ರಿಗಳು ಕೊಟ್ಟರತಕ್ಕಂಥ ಉತ್ತರದಲ್ಲಿ ಅವರು ಏನು ಹೇಳಿದ್ದಾರೆಂದರೆ, ಈ ಸದನ ಸೇರುವುದಕ್ಕೆ ಒಂಬೆ ಗಂಟೆಗೆ ಮೊದಲು ತಮ್ಮ ಕಛೇರಿಗೆ ಅದನ್ನು ಕೊಡಿಸಿದ್ದೇವೆ, ಅದನ್ನು ಅಲ್ಲಿ ಇಟ್ಟಿರುತ್ತೇವೆ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ಅದಕ್ಕೆ ಒಂದು ಹೊಸ ತಿರುವನ್ನು ಕೊಡತಕ್ಕಂಥ ಪ್ರಯತ್ನವನ್ನು ಮಾಡಿದ್ದಾರೆ. ಆದರೆ ನನಗೆ ಗೊತ್ತಿರುವ ಮಟ್ಟಿಗೆ ಇದು ಲೆಜಿಸ್ಲೇಚರ್ ಸೆಕ್ರೆಟರಿಯೇಟ್‌ನಿಂದ ಆಗಿರತಕ್ಕಂಥ ಘಟನೆಯಲ್ಲ, ಕಾರಣವೇನೆಂದರೆ, ನಾವು ಈ